ದಿನಾಂಕ 14-10-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: 21 ರಿಂದ 26 ನೇ ಪ್ರತಿವಾದಿಗಳ ಪರ ಶ್ರೀ ಎಫ್.ಬಿ.ಎಂ ವಕೀಲರಿಂದ:**

1. ದಾವಾ ಶೆಡ್ಯೂಲ್ ಎಫ್ ಮತ್ತು ಜಿ ಆಸ್ತಿಗಳ ಸರ್ವೇ ನಂಬರುಗಳು, ವಿಸ್ತೀರ್ಣ ಮತ್ತು ಚಕ್ಕುಬಂದಿಗಳು ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿಗಳು ಮೂಲ ಪುರಷ ಭರಮಪ್ಪ ಇಂಗಳಕಿ ಯವರಿಗೆ ಆತನ ತಾಯಿ ಭರಮಕ್ಕ ಅವರಿಂದ ಬಂದಿರುತ್ತವೆ. ಭರಮಕ್ಕ ಅವರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ಭರಮಕ್ಕ ಅವರಿಗೆ ಭರಮಪ್ಪ ಮತ್ತು ಮಲ್ಲಪ್ಪ ಎಂಬ ಇಬ್ಬರು ಗಂಡು ಮಕ್ಕಳು ಎಂದರೆ ಸರಿ. ದಾವಾ ಶೆಡ್ಯೂಲ್ ಎಫ್ ಮತ್ತು ಜಿ ಆಸ್ತಿಗಳ ಹಳೇಯ ಸರ್ವೇ ನಂಬರುಗಳು ನನಗೆ ಗೊತ್ತಿರುವುದಿಲ್ಲ. ದಾವಾ ಶೆಡ್ಯೂಲ್ ಎಫ್ ಮತ್ತು ಜಿ ಆಸ್ತಿಗಳು ಮೊದಲಿಗೆ ಸ ನಂ: 121/2 ಅಂತಾ ಇದ್ದು, ಅದರ ಒಟ್ಟು ಕ್ಷೇತ್ರ 5 ಎಕರೆ 11 ಗುಂಟೆ ಇತ್ತು ಎಂದರೆ ಸರಿ. ಸದರಿ ಜಮೀನು ಭರಮಕ್ಕ ಅವರು ಮರಣ ನಂತರ ಆಕೆಯ ಮಕ್ಕಳಾದ ಮಲ್ಲಪ್ಪ ಮತ್ತು ಭರಮಪ್ಪ ಅವರಿಗೆ ವಾರಸಾ ಪ್ರಕಾರ ಬಂದಿರುತ್ತವೆ ಎಂದರೆ ಸರಿ.

2. ಸ ನಂ: 121/2 ವಿಸ್ತೀರ್ಣ 5 ಎಕರೆ 11 ಗುಂಟೆ ಜಮೀನನ್ನು ಸದರಿ ಮಲ್ಲಪ್ಪ ಮತ್ತು ಭರಮಪ್ಪ ರವರು ಮೌಖಿಕವಾಗಿ ತಲಾ ಅರ್ಧ ಭಾಗದ ಹಿಸ್ಸೇಯನ್ನು ಮಾಡಿಕೊಂಡಿದ್ದರು ಎಂದರೆ ಸರಿ. ಸದರಿ ಮೌಖಿಕ ಹಿಸ್ಸೇಯ ಪ್ರಕಾರ ಪಶ್ಚಿಮ ಭಾಗದ ಅರ್ಧ ಹಿಸ್ಸೇ ಮಲ್ಲಪ್ಪನಿಗೆ ಬಂದಿದ್ದು ಮತ್ತು ಅದೇ ರೀತಿ ಪೂರ್ವ ಭಾಗದ ಅರ್ಧ ಹಿಸ್ಸೇ ಭರಮಪ್ಪ ರವರ ಹಿಸ್ಸೇಗೆ ಬಂದಿತ್ತು ಎಂದರೆ ಸರಿ. ಮೂಲ ಪುರುಷ ಭರಮಪ್ಪ ಅವರಿಗೆ ಪುಟ್ಟಪ್ಪ, ಪಕ್ಕೀರಪ್ಪ, ಸಾವಕ್ಕ, ಭರಮವ್ವ ಮತ್ತು ಪಕ್ಕೀರವ್ವ ರವರು ಮಕ್ಕಳಿದ್ದು, ಅವರನ್ನು ಹೊರತುಪಡಿಸಿ ಆತನಿಗೆ ಬೇರೆ ಮಕ್ಕಳು ಇರುವುದಿಲ್ಲ. ಭರಮಪ್ಪ 1940 ರಲ್ಲಿ ಮರಣ ಹೊಂದಿದ ನಂತರ ಆತನನ ಹಿಸ್ಸೇಗೆ ಬಂದ ಪೂರ್ವ ಭಾಗದ ಹಿಸ್ಸೇಯ ಜಮೀನು ಆತನ ಮಗ ಪುಟ್ಟಪ್ಪ ಅವರ ಏಕೈಕ ಹೆಸರಿನಲ್ಲಿ ಖಾತೆ ಆಗಿತ್ತು. ಭರಮಪ್ಪ

ಮರಣ ಹೊಂದಿದ ನಂತರ ಆತನ ಇನ್ನೊಬ್ಬ ಮಗನಾದ ಪಕ್ಕೀರಪ್ಪನಿಗೂ ಸಹ ವಾರಸಾ ಪ್ರಕಾರ ಹಕ್ಕು ಬಂದಿತ್ತು ಎಂದರೆ ಸರಿ. ಪುಟ್ಟಪ್ಪ ಅವರು ಯಾವ ವರ್ಷದಲ್ಲಿ ಮರಣ ಹೊಂದಿರುತ್ತಾನೆ ಎಂದು ಗೊತ್ತಿಲ್ಲ. ಪುಟ್ಟಪ್ಪ ಮರಣ ಹೊಂದಿದ ಕಾಲಕ್ಕೆ ಆತನ ಮಕ್ಕಳಾದ 1 ಮತ್ತು 2 ನೇ ವಾದಿಗಳು ಚಿಕ್ಕ ವಯಸ್ಸಿನವರು ಇದ್ದರು ಎಂದರೆ ಸರಿ. ಆತ ಮರಣ ಹೊಂದಿದ ನಂತರ 1 ಮತ್ತು 2 ನೇ ವಾದಿಗಳು ಪಕ್ಕೀರಪ್ಪ ರವರ ಜೊತೆ ವಾಸವಾಗಿದ್ದರು ಎಂದರೆ ಸರಿ. ಪುಟ್ಟಪ್ಪ ಮರಣ ಹೊಂದಿದ ನಂತರ 1 ಮತ್ತು 2 ನೇ ವಾದಿಗಳ ತಾಯಿಯಾದ ಸಾವಕ್ಕಳು ಸಹ ಮರಣ ಹೊಂದಿರುತ್ತಾರೆ ಎಂದರೆ ಸರಿ.

3. ಪುಟ್ಟಪ್ಪ ಮತ್ತು ಸಾವಕ್ಕ ರವರು ಮರಣ ಹೊಂದಿದ ಕಾರಣಕ್ಕೆ 1 ಮತ್ತು 2 ನೇ ವಾದಿಯರನ್ನು ಪಕ್ಕೀರಪ್ಪ ರವರೇ ಜೋಪಾನ ಮಾಡಿದ್ದರು ಎಂದರೆ ಸರಿ. ಅವರ



ಮದುವೆಯನ್ನು ಚಿಕ್ಕಪ್ಪ ಪಕ್ಕೀರಪ್ಪನೇ ಮಾಡಿರುತ್ತಾನೆ ಎಂದರೆ ಸರಿ. ನಮ್ಮ ಗ್ರಾಮದಲ್ಲಿ ಇರುವ ವ್ಯವಸಾಯ ಸೇವಾ ಸಹಕಾರಿ ಸಂಘವು ನನ್ನ ಹಿರಿಯರ ಕಾಲದಿಂದಲೂ ಇದೆ. ನಮ್ಮ ಕುಟುಂಬದ ಹಿರಿಯರು ಜಮೀನುಗಳನ್ನು ಬೆಳವಣಿಗೆ ಮತ್ತು ಅಭಿವೃದ್ಧಿಪಡಿಸಲು ಸದರಿ ಸೊಸೈಟಿಯಲ್ಲಿ ಸಾಲವನ್ನು ಮಾಡುತ್ತಿದ್ದರು ಎಂದರೆ ಸರಿ. ಭರಮಪ್ಪನ ಹಿಸ್ಸೇಗೆ ಬಂದಿದ್ದ ಹಳೇಯ ಸ ನಂಃ 121/2 ಒಟ್ಟು ಕ್ಷೇತ್ರ 5 ಎಕಟೆ 11 ಗುಂಟೆ ಪೈಕಿ ಪೂರ್ವ ಭಾಗದ ಅರ್ಧ ಹಿಸ್ಸೇ ಜಮೀನು ಖುಷ್ಕಿ ಜಮೀನು ಎಂದರೆ ಸರಿ. ಆ ಸಮಯಕ್ಕೆ ಒಟ್ಟು ಕುಟುಂಬದಲ್ಲಿ ದುಡಿಯುವ ವ್ಯಕ್ತಿ ಪಕ್ಕೀರಪ್ಪ ಒಬ್ಬನೇ ಆಗಿದ್ದನು ಎಂದರೆ ಸರಿ. ಪುಟ್ಟಪ್ಪ ಮತ್ತು ಸಾವಕ್ಕ ಮರಣ ಹೊಂದಿದ ನಂತರದ ಸಮಯದಲ್ಲೂ ಸಾವಕ್ಕ, ಭರಮವ್ವ ಮತ್ತು ಪಕ್ಕೀರವ್ವ ರವರು ಮದುವೆ ಆಗಿರಲಿಲ್ಲ ಎಂದರೆ ಸರಿ. ಸದರಿ ಕಾರಣಕ್ಕೆ ಅವರ ಆಗು ಹೋಗುಗಳನ್ನು ಪಕ್ಕೀರಪ್ಪ ಅವರೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ಪಕ್ಕೀರಪ್ಪ ಅವರೇ ತನ್ನ ಸಹೋದರಿಯರಾದ ಸಾವಕ್ಕ, ಭರಮವ್ವ ಮತ್ತು ಪಕ್ಕೀರವ್ವ ರವರ ಮದುವೆಯನ್ನು ನೆರವೇರಿಸಿರುತ್ತಾನೆ ಎಂದರೆ ಸರಿ.

4. ದಾವಾ ಶೆಡ್ಯೂಲ್ ಎ ಮತ್ತು ಬಿ ಆಸ್ತಿಗಳು ಗ್ರಾಮದ ಮಧ್ಯೆ ಇದ್ದ ನಿವೇಶನ ಗಳಾಗಿದ್ದು, ಅಲ್ಲಿ ಫಸಲನ್ನು ಬೆಳೆಯಲು ಆಗುತ್ತಿರಲಿಲ್ಲ ಎಂದರೆ ಸರಿ. ಸದರಿ ಎ ಮತ್ತು ಬಿ ಆಸ್ತಿಗಳಲ್ಲಿ ಪ್ರಸ್ತುತ ಮನೆಗಳು ಇವೆ. ದಾವಾ ಶೆಡ್ಯೂಲ್ ಸಿ ಮತ್ತು ಡಿ ಆಸ್ತಿಗಳನ್ನು ಒಂದೇ ಸ ನಂಃ 146/11 ಮತ್ತು 146/11 ಎಂದು ತೋರಿಸಲಾಗಿದೆ ಎಂದರೆ ಸರಿ. ದಾವಾ ಶೆಡ್ಯೂಲ್ ಸಿ ಮತ್ತು ಡಿ ಆಸ್ತಿಗಳು ನೀರಾವರಿ ಜಮೀನುಗಳಾಗಿರುತ್ತವೆ. ಸ ನಂಃ 146/11 ರ ಜಮೀನಿಗೆ ಸಂಬಂಧಿಸಿದ ನಿ.ಪಿ-3 ರ ಪಹಣಿ ಪತ್ರಿಕೆಯಲ್ಲಿ ನೀರಾವರಿಯ ಮೂಲಗಳು ಕೆರೆ ಅಥವಾ ಕಾಲುವೆ ಎಂದು ತೋರಿಸಿರುವುದಿಲ್ಲ. ಸ ನಂಃ 146/11 ರ ಜಮೀನುಗಳು ಖುಷ್ಕಿ ಜಮೀನುಗಳು ಎಂದರೆ ಸರಿ. 1970 ರ ಇಸವಿಯಲ್ಲಿ ದಾವಾ ಆಸ್ತಿಗಳ ಆದಾಯವನ್ನು ಹೊರತುಪಡಿಸಿ ಪಕ್ಕೀರಪ್ಪ ಅವರಿಗೆ ಇತರ ಆದಾಯದ ಮೂಲಗಳು ಇರಲಿಲ್ಲ ಎಂದರೆ ಸರಿ.



5. ಸದರಿ ಸಮಯದಲ್ಲಿ ಪುಟ್ಟಪ್ಪನ ಇಬ್ಬರು ಹೆಣ್ಣು ಮಕ್ಕಳು ಮತ್ತು ಪಕ್ಕೀರಪ್ಪ ರವರ 3 ಜನ ಸಹೋದರಿಯರು ಇದ್ದುದರಿಂದ ಕುಟುಂಬದ ಆಸ್ತಿಗಳಲ್ಲಿ ಬರುತ್ತಿದ್ದ ಆದಾಯಗಳು ಅವರನ್ನು ಸಾಕಿ ಸಲಹಲು ಸಾಕಾಗುತ್ತಿತ್ತು ಎಂದರೆ ಸರಿ. ಪಕ್ಕೀರಪ್ಪ ಅವರ ಕುಟುಂಬದ ಜಮೀನುಗಳನ್ನು ಅಭಿವೃದ್ಧಿಪಡಿಸಲು ವ್ಯವಸಾಯ ಸೇವಾ ಸಹಕಾರ ಸಂಘದಲ್ಲಿ ಸಾಲ ಮಾಡಿದ್ದನು ಎಂದರೆ ಸರಿಯಲ್ಲ. ನಾನು ನನ್ನ ಕುಟುಂಬದ ಅಸ್ತಿಗಳಿಗೆ ಸಂಬಂಧಿಸಿದಂತೆ ಸೊಸೈಟಿಗಳಲ್ಲಿ ಸಾಲಗಳು ಇರುತ್ತದೆಯೋ ಅಥವಾ ಇಲ್ಲವೋ ಎಂದು ದಾಖಲೆಗಳನ್ನು ತೆಗೆಸಿ ನೋಡಿದ್ದು ಆದರೆ ಯಾವುದೇ ಸಾಲಗಳನ್ನು ಪಡೆದಿರುವ ಬಗ್ಗೆ ದಾಖಲೆಗಳು ಇರುವುದಿಲ್ಲ. ನಾನು ಸಾಲಗಳು ಇರುವಿಕೆಯ ಬಗ್ಗೆ ತೆಗೆಸಿದ ದಾಖಲೆಗಳು ನನ್ನ ಬಳಿಯೇ ಇವೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ.

6. ಪಕ್ಕೀರಪ್ಪ ಅವರು ಒಟ್ಟು ಕುಟುಂಬದ ಜಮೀನುಗಳ ಮೇಲೆ ತೆಗೆದಿದ್ದ ಸಾಲಗಳನ್ನು ಮರುಪಾವತಿ ಮಾಡಿಸಲು ಮತ್ತು ತನ್ನ ಸಹೋದರಿ ಹಾಗೂ ಅಣ್ಣನ ಹೆಣ್ಣು

ಮಕ್ಕಳ ಸಾಕಿ ಸಲುಹಲು ಮಾಡಿದ್ದ ಸಾಲಗಳನ್ನು ತೀರಿಸಲು ಮತ್ತು ಮನೆತನದ ಅವಶ್ಯಕತೆಗಾಗಿ ಭರಮಪ್ಪನ ಹಿಸ್ಸೇಗೆ ಬಂದಿದ್ದ ಸ ನಂಃ 121/2 ರ ಪೂರ್ವ ಭಾಗದ ಅರ್ಧ ಹಿಸ್ಸೇಯನ್ನು ರೂ.500/- ಗಳಿಗೆ ಶಿವಪ್ಪ ಮಲ್ಲಪ್ಪ ಇಂಗಳಕಿ ರವರಿಗೆ ಮಾರಾಟ ಮಾಡಿದ್ದನು ಎಂದರೆ ಸರಿ. ಆ ರೀತಿ ಮಾರಾಟ ಮಾಡಿದ ನಂತರ ಮಲ್ಲಪ್ಪ ಅವರಿಗೆ ಹಿಸ್ಸೇಯಲ್ಲಿ ಬಂದಿದ್ದ ಪಶ್ಚಿಮ ಭಾಗದ 2 ಎಕರೆ 11 ಗುಂಟೆ ಮತ್ತು ಮೇಲಿನಂತೆ ಖರೀದಿ ಮಾಡಿದ 2 ಎಕರೆ 11 ಗುಂಟೆ ಜಮೀನನ್ನು ಶಿವಪ್ಪರವರೊಂದಿಗೆ ಆತನ ಸಹೋದರ ರಾದ ಪರಸಪ್ಪ, ಹನುಮಂತಪ್ಪ, ಪಕ್ಕೀರಪ್ಪ ರವರು ಸಾಮೂಹಿಕವಾಗಿ ಮಾಲ್ಕಿ ವಹಿವಾಟು ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿ. ಸದರಿ ಖರೀದಿ ಆಧಾರದ ಮೇಲೆ ಡ ಸಂಃ 1905 ನ್ನು ಕಂದಾಯ ಅಧಿಕಾರಿಗಳು ಮಂಜೂರು ಮಾಡಿರುತ್ತಾರೆ ಎಂದರೆ ಸರಿ.



7. ಸದರಿ ಒಟ್ಟು ಕ್ಷೇತ್ರ 5 ಎಕರೆ 11 ಗುಂಟೆ ಜಮೀನನ್ನು ಒಟ್ಟುಗೂಡಿಸಿ ಶಿವಪ್ಪ ಮತ್ತು ಆತನ ಸಹೋದರರಾದ ಪರಸಪ್ಪ, ಹನುಮಂತಪ್ಪ, ಪಕ್ಕೀರಪ್ಪರವರು ಹಿಸ್ಸೇ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಆ ರೀತಿ ಹಿಸ್ಸೇ ಮಾಡಿಕೊಂಡಾಗ ಒಟ್ಟು ಕ್ಷೇತ್ರ 5 ಎಕರೆ 11 ಗುಂಟೆ ಜಮೀನಿನ ಪೈಕಿ ಪಶ್ಚಿಮ ಭಾಗದ 1 ಎಕರೆ 12 ಗುಂಟೆ ಜಮೀನು ಪರಸಪ್ಪನ ಹಿಸ್ಸೇಗೆ, ಪರಸಪ್ಪನ ಹಿಸ್ಸೇಗೆ ಬಂದ ಹಿಸ್ಸೇಯ ಜಮೀನಿನ ಪೂರ್ವ ಭಾಗಕ್ಕೆ 1 ಎಕರೆ 13 ಗುಂಟೆ ಜಮೀನು ಶಿವಪ್ಪ ಅವರ ಹಿಸ್ಸೇಗೆ, ಶಿವಪ್ಪನ ಹಿಸ್ಸೇಗೆ ಬಂದ ಹಿಸ್ಸೇಯ ಜಮೀನಿನ ಪೂರ್ವ ದಿಕ್ಕಿನ 1 ಎಕರೆ 12 ಗುಂಟೆ ಪಕ್ಕೀರಪ್ಪ ರವರ ಹಿಸ್ಸೇಗೆ, ಆತನ ಪೂರ್ವ ಭಾಗದ ಹಿಸ್ಸೇಯ ಜಮೀನಿಗೆ ಹೊಂದಿಕೊಂಡಂತೆ 1 ಎಕರೆ 13 ಗುಂಟೆ ಹನುಮಂತಪ್ಪನ ಹಿಸ್ಸೇಗೆ ಬಂದಿರುತ್ತವೆ ಎಂದರೆ ಸರಿ. ಪರಸಪ್ಪನ ಹಿಸ್ಸೇಗೆ ಬಂದ ಜಮೀನಿಗೆ ಕಂದಾಯ ಅಧಿಕಾರಿಗಳು ಸ ನಂಃ 121/3 ಎಂದು, ಶಿವಪ್ಪನ ಹಿಸ್ಸೇಗೆ ಬಂದ ಜಮೀನಿಗೆ ಕಂದಾಯ ಅಧಿಕಾರಿಗಳು ಸ ನಂಃ 121/4 ಎಂದು, ಪಕ್ಕೀರಪ್ಪನ ಹಿಸ್ಸೇಗೆ ಬಂದ ಜಮೀನಿಗೆ ಕಂದಾಯ ಅಧಿಕಾರಿಗಳು ಸ ನಂಃ 121/5 ಎಂದು, ಹನುಮಂತಪ್ಪನ ಹಿಸ್ಸೇಗೆ ಬಂದ ಜಮೀನಿಗೆ ಕಂದಾಯ ಅಧಿಕಾರಿಗಳು ಸ ನಂಃ 121/6 ಎಂದು ಸರ್ವೇ

ನಂಬರುಗಳನ್ನು ಮಂಜೂರು ಮಾಡಿರುತ್ತಾರೆ ಎಂದರೆ ಸರಿ.

8. ಪರಸಪ್ಪ ಮಲ್ಲಪ್ಪ ಇಂಗಳಕಿ ಯವರು ಮರಣ ಹೊಂದಿರುತ್ತಾರೆ ಎಂದರೆ ಸರಿ. ಆತನಿಗೆ ಪ್ರತಿವಾದಿ 22 ಮತ್ತು 23 ರವರು ಮಕ್ಕಳುಗಳು ಎಂದರೆ ಸರಿ. ಪರಸಪ್ಪ ಅವರ ಹಿಸ್ಸೇಗೆ ಬಂದಿದ್ದ 1 ಎಕರೆ 12 ಗುಂಟೆ ಜಮೀನಿನ ಪೈಕಿ ಆತನ ಮಕ್ಕಳಾದ 22 ಮತ್ತು 23 ನೇ ಪ್ರತಿವಾದಿಗಳು ತಲಾ 26 ಗುಂಟೆ ಜಮೀನನ್ನು ಹಿಸ್ಸೇ ಮಾಡಿಕೊಂಡು ವಹಿವಾಟು ಮಾಡುತ್ತಿದ್ದಾರೆ ಎಂದರೆ ಸರಿ. ಶಿವಪ್ಪ ಮಲ್ಲಪ್ಪ ಇಂಗಳಕಿ ಯವರು ಸಹ ಮರಣ ಹೊಂದಿರುತ್ತಾರೆ ಎಂದರೆ ಸರಿ. ಶಿವಪ್ಪ ಮಲ್ಲಪ್ಪ ಇಂಗಳಕಿ ರವರಿಗೆ ಪ್ರತಿವಾದಿ 24 ರಿಂದ 26 ರವರು ಮಕ್ಕಳುಗಳು ಎಂದರೆ ಸರಿ. ಮೃತ ಶಿವಪ್ಪನ ಹಿಸ್ಸೇಗೆ ಬಂದಿದ್ದ ಸ ನಂಃ 121/4 ರ ಒಟ್ಟು ಕ್ಷೇತ್ರ 1 ಎಕರೆ 13 ಗುಂಟೆ ಜಮೀನನ್ನು ಆತನ ಮಕ್ಕಳಾದ

-14-

ಪ್ರತಿವಾದಿ 24 ನೇದ್ದವರಿಗೆ 13 ಗುಂಟೆ ಮತ್ತು 25 ಹಾಗೂ 26 ನೇ ಪ್ರತಿವಾದಿಗಳು ತಲಾ 20 ಗುಂಟೆಯಂತೆ ಹಿಸ್ಸೇ ಮಾಡಿಕೊಂಡು ವಹಿವಾಟು ಮಾಡುತ್ತಿದ್ದಾರೆ. ಹನುಮಂತಪ್ಪ ಇಂಗಳಕಿಯವರಿಗೆ ಶೇಖಪ್ಪ ಎಂಬ ಮಗ ಇದ್ದಾನೆ ಎಂದರೆ ಸರಿ.

(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು).

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**)**

ಓ**.** ಹೇ**.** ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ**.**

**Sd/-**

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ**.**

ಸಾಕ್ಷಿದಾರರ ಸಹಿ